60	ಬೇಗೂರು	ಬೇಗೂರು
61	ಮುಗುಟಗೇರಿ	ಮುಗುಟಗೇರಿ
62	ಚಿಕ್ಕಮಂಡೂರು	ಚಿಕ್ಕಮಂಡೂರು
63	ಬಲ್ವನಂದೂರು	ಬಲ್ವನಂದೂರು
64	ಬೆಲ್ಲೂರು	ಬೆಲ್ಲೂರು
65	ಟಿ.ಶೆಟ್ಟಗೇರಿ	ಟಿ.ಶೆಟ್ಟಿಗೇರಿ
66	ಹರಿಹರ	ಹರಿಹರ
67	ಕೊತ್ತೂರು	ಕೊತ್ತೂರು
68	ನಲ್ಕೇರಿ ಫಾರೆಸ್ಟ್	ನಲ್ಕೇರಿ ಫಾರೆಸ್ಟ್
69	ನಲ್ಕೇರಿ	ನಲ್ಕೇರಿ
70	ಕುಮ್ಟೂರು	ಕುಮ್ಟೂರು
71	ಕುರ್ಜಿ	ಕುರ್ಜಿ
72	ಮಂಚಲಿ ಫಾರೆಸ್ಟ್	ಮಂಚಲಿ ಫಾರೆಸ್ಟ್
73	ಕುಟ್ಟ	ಕುಟ್ಟ
74	ಬಡಗ	ಬಡಗ
75	ದನುಗಾಲ	ದನುಗಾಲ
76	ಬಾಳೆಲೆ	ಬಾಳೆಲೆ
77	ಬೀಲೂರು	ಬೀಲೂರು
78	ಬೆಸಗೂರು	ಬೆಸಗೂರು
79	ಕೊಟ್ಟಗೇರಿ	ಕೊಟ್ಟಗೇರಿ
80	ದೇವನೂರು	ದೇವನೂರು
81	ನಿಟ್ಟೂರು	ನಿಟ್ಟೂರು
82	ನಾಲೂರು	ನಾಲೂರು
83	ಹತ್ತು ಗಟೌಲ್ ಫಾರೆಸ್ಟ್ –1	ಹತ್ತು ಗಟೌಲ್ ಫಾರೆಸ್ಟ್ –1

4131 (5198) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮುತ್ತಿನಕೊಪ್ಪ ಎಂ.ಯು.ಎಸ್. ಎಸ್. ನಿಂದ ನರಸಿಂಹರಾಜಪುರಕ್ಕೆ ವಿದ್ಯುತ್ ಸರಬರಾಜು ಮಾಡಲು ರಿಸೀವಿಂಗ್ ಸ್ಟೇಷನ್ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹೌದಾದಲ್ಲಿ ಅಂದಾಜು ವೆಚ್ಚ, ಸ್ಥಾಪಿಸುವ ದಿನಾಂಕ ಇತ್ಯಾದಿ ವಿವರವನ್ನು ನೀಡುವುದು?

ಇ) ನರಸಿಂಹರಾಜಪುರದಿಂದ ಕೊಪ್ಪಕ್ಕೆ ವಿದ್ಯುತ್ ಸರಬರಾಜು ಮಾಡುವ ಯೋಜನೆ ಇದೆಯೇ; ಕೊಪ್ಪತಾಲ್ಲೂಕು ಜಯಪುರದಲ್ಲಿ ಎಂ.ಯು.ಎಸ್.ಎಸ್. ನ ಸ್ಥಾಪನೆ ಅವಶ್ಯಕತೆಯಿದೆ ಎಂದು ಸರ್ಕಾರ ಮನಗಂಡಿದೆಯೇ?

ಈ) ಹೌದಾದಲ್ಲಿ ಮಂಜೂರಾತಿಯನ್ನು ಯಾವಾಗ ನೀಡಲಾಗುವುದು ಹಾಗೂ ಇದರ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು

ಆ) ಮುತ್ತಿನಕೊಪ್ಪದಿಂದ ಪ್ರಸ್ತಾವಿತ ಎನ್.ಆರ್.ಪುರ 33 ಕೆ.ವಿ. ಸಬ್-ಸ್ಟೇಷನ್ ಮುಖಾಂತರ ಕೊಪ್ಪದಲ್ಲಿರುವ 33 ಕೆ.ವಿ. ಸಬ್-ಸ್ಟೇಷನ್ನಿಗೆ ಜೋಡಿ ಮಾರ್ಗವನ್ನು ನಿರ್ಮಿಸುವ ವೆಚ್ಚವು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

1	ಮುತ್ತಿನಕೊಪ್ಪದಿಂದ ಪ್ರಸ್ತಾವಿತ ಎನ್. ಆರ್. ಪುರ 33 ಕೆ.ವಿ. ಸಬ್-ಸ್ಟೇಷನ್ ಮುಖಾಂತರ ಕೊಪ್ಪ 33 ಕೆ.ವಿ. ಸಬ್-ಸ್ಟೇಷನ್‌ಗೆ 33 ಕೆ.ವಿ ಜೋಡಿಮಾರ್ಗ ನಿರ್ಮಿಸಲು ಅಂದಾಜು ವೆಚ್ಚ	329.74
2	ಎನ್.ಆರ್.ಪುರದಲ್ಲಿ ಪ್ರಸ್ತಾವಿತ 15 ಎಂ.ವಿ.ಎ. 33/11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ಅಂದಾಜು ವೆಚ್ಚ	29.58
3	ಕೊಪ್ಪದಲ್ಲಿರುವ 33 ಕೆ.ವಿ. ಸಬ್-ಸ್ಟೇಷನ್ನಿನಲ್ಲಿ 2 ಟರ್ಮಿನಲ್ ಬೇಗಳ ನಿರ್ಮಾಣದ ಅಂದಾಜು ವೆಚ್ಚ	35.51
	ಒಟ್ಟು	**594.83**

ಮುತ್ತಿನಕೊಪ್ಪದಿಂದ ಎನ್. ಆರ್. ಪುರಕ್ಕೆ ಎಳೆಯಬೇಕಗಿರುವ 33 ಕೆ.ವಿ.ವಿದ್ಯುತ್ ಲೈನುಗಳೂ ರಕ್ಷಿತ ಅರಣ್ಯ ಪ್ರದೇಶದಲ್ಲಿ ಬರುವುದರಿಂದ, ಅರಣ್ಯ ಇಲಾಖೆಯ ಅನುಮತಿ ಅವಶ್ಯವಾಗಿ ಬೇಕಿರುತ್ತದೆ. ಈ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಉಪ ಅರಣ್ಯ ಅಧಿಕಾರಿ, ಕೊಪ್ಪ ಇವರಿಗೆ ಸಲ್ಲಿಸಲಾಗಿದೆ. ಮೆಸ್ಕಾಂ ಅಧಿಕಾರಿಗಳು ದಿನಾಂಕ 25.7.05 ಉಪ ಅರಣ್ಯ ಅಧಿಕಾರಿ ಕೊಪ್ಪ ಇವರ ಜೊತೆಗೂಡಿ ಎನ್.ಆರ್.ಪುರಕ್ಕೆ 33 ಕೆ.ವಿ. ಲೈನು ಎಳೆಯಲು ಬೇಕಾಗುವ ಅರಣ್ಯ ಭೂಮಿಯ ಸ್ಥಳ ಪರಿಶೀಲನೆಯನ್ನು ಜಂಟಿಯಾಗಿ ಮಾಡಿದ್ದಾರೆ. ಸ್ಥಳ ಪರಿಶೀಲನೆ ವರದಿಯನ್ನು ಉಪ ಅಣ್ಯ ಅಧಿಕಾರಿ, ಕೊಪ್ಪ ಇವರು ಸದ್ಯದಲ್ಲಿಯೇ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರಿಗೆ ಕಳುಹಿಸಿ ಕೊಡಲಿದ್ದಾರೆ. ಉದ್ದೇಶಿತ ಈ ವಿದ್ಯುತ್ ಮಾರ್ಗಕ್ಕಾಗಿ ಅರಣ್ಯ ಇಲಾಖೆಯ ಅನುಮತಿ ದೊರೆತ

ನಂತರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕಾಮಗಾರಿಗಳನ್ನು ಕೈಗೆತ್ತಿಕೊಂಡು, 9 ರಿಂದ 12 ತಿಂಗಳೊಳಗೆ ಕಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಇ) ಪ್ರಸ್ತುತ ಪ್ರಸ್ತಾವನೆಯಂತೆ ಮುತ್ತಿನಕೊಪ್ಪದಿಂದ 33 ಕೆ.ವಿ ಜೋಡಿ ಮಾರ್ಗದ ಮೂಲಕ ಉದ್ದೇಶಿತ ಎನ್.ಆರ್ ಪುರ 33 ಕೆ.ವಿ ಸಬ್–ಸ್ಟೇಷನ್ ಮುಖಾಂತರ ಕೊಪ್ಪದಲ್ಲಿರುವ 33 ಕೆ.ವಿ ಸಬ್–ಸ್ಟೇಷನ್ನಿಗೆ ವಿದ್ಯುತ್ ಸರಬರಾಜು ಮಾಡುವ ಯೋಜನೆ ಇದೆ.

ಕೊಪ್ಪ ತಾಲ್ಲೂಕಿನ ಜಯಪುರದಲ್ಲಿ 33 ಕೆ.ವಿ. ಎಂ.ಯು.ಎಸ್.ಎಸ್. ಸ್ಥಾಪನೆಯ ಪ್ರಸ್ತಾವನೆಯು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಮುಂದೆ ಇದೆ.

ಈ) ಜಯಪುರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33 ಕೆ.ವಿ ಸಬ್–ಸ್ಟೇಷನ್ (ಎಂ.ಯು.ಎಸ್.ಎಸ್) ಕಮಗರಿಯ ಅಂದಾಜು ಪಟ್ಟಿಯು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ತಯಾರಿಕೆಯ ಹಂತದಲ್ಲಿದೆ. ಆ ನಂತರ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು. ಈ ಕಾಮಗಾರಿಯ ವಿವರವಾದ ಯೋಜನಾ ವರದಿಯು ಸಿದ್ಧಗೊಂಡ ನಂತರವೇ ಅಂದಾಜು ವೆಚ್ಚದ ಬಗ್ಗೆ ತಿಳಿಯುತ್ತದೆ.

4163 (5180) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ನೀರಾವರಿ ಪಂಪ್ ಸೆಟ್‌ಗಳಿಗೆ ಅಕ್ರಮ ವಿದ್ಯುತ್ತನ್ನು ಸಕ್ರಮ ಗೊಳಿಸಲು ಕಳೆದು ಮೂರು ವರ್ಷಗಳಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು? (ವರ್ಷವಾರು ವಿವರ ನೀಡುವುದು)

ಆ) ಕೆ.ಇ.ಬಿ.ಯಿಂದ ಸಕ್ರಮಗೊಳಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಬಾಕಿ ಉಳಿದ ಅರ್ಜಿಗಳೆಷ್ಟು?

ಈ) ಬಾಕಿ ಉಳಿದ ಅಕ್ರಮ ಸಂಪರ್ಕ ಸಕ್ರಮಗೊಳಿಸಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಅ) 2002–03, 2003–04, 2004–05ರ ಸಾಲಿನಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕಾಗಿ ಸ್ವೀಕರಿಸಲ್ಪಟ್ಟ ಅರ್ಜಿಗಳ ಒಟ್ಟು ಸಂಖ್ಯೆ 77,708. ವರ್ಷವಾರು ವಿವರಗಳು ಕೆಳಕಂಡಂತಿವೆ.